**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 29/2023**

**ಚಾ.ಸಾ. :- 18**
**ಪ್ರಾ.ಸಾ. :- 01**

| | | |
|---|---|---|
| ಹೆಸರು | : | ಪ್ರಕಾಶ್.ಬಿ.ಎಸ್. |
| ತಂದೆಯ ಹೆಸರು | : | ಸಿದ್ದಯ್ಯ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಪೊಲೀಸ್ ನಿರೀಕ್ಷಕರು, ಮಂಡ್ಯ ಗ್ರಾಮಾಂತರ ಪೋಲೀಸ್ ಠಾಣೆ |
| ವಾಸಸ್ಥಳ | : | ಮಂಡ್ಯ. |

---

**ಪ್ರಮಾಣೀಕರಿಸಲಾದ ದಿನಾಂಕಃ- 24.12.2025.**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ನಾನು 2022 ರಿಂದ 2025 ರ ಅವಧಿಯಲ್ಲಿ ಶ್ರೀರಂಗಪಟ್ಟಣ ಟೌನ್ ಪೊಲೀಸ್ ಠಾಣೆಯಲ್ಲಿ ಪಿ.ಐ.ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 28.03.2023 ರಂದು ನಾನು ಚಾ.ಸಾ-17 ರವರಿಂದ ಕಡತವನ್ನು ಸ್ವೀಕರಿಸಿ ತನಿಖೆ ಮುಂದುವರೆಯಿಸಿರುತ್ತೇನೆ.

ಪಂಚರ ಸಮಕ್ಷಮ ಮೃತರ ಶವಪಂಚನಾಮೆಯನ್ನು ಜರುಗಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ-1** ಎಂದು ಗುರುತಿಸಲಾಯಿತು. ಸಾಕ್ಷಿದಾರರ ಹೇಳಿಕೆ ದಾಖಲು ಮಾಡಿರುತ್ತೇನೆ ಹಾಗೂ ಪೋಟೋ ತೆಗೆಸಿರುತ್ತೇನೆ. ಮೃತರ ಮರಣೋತ್ತರ ಪರೀಕ್ಷೆ ಮಾಡಿಕೊಡಲು ವೈದ್ಯರಿಗೆ ಮನವಿ ಸಲ್ಲಿಸಿರುತ್ತೇನೆ.

ನಂತರ ಕೃತ್ಯ ಸ್ಥಳಕ್ಕೆ ಹೋಗಿ ಪಂಚರ ಸಮಕ್ಷಮದಲ್ಲಿ ಕೃತ್ಯ ಸ್ಥಳದ ಮಹಜರನ್ನು ತಯಾರು ಮಾಡಿರುತ್ತೇನೆ. ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ-2** ಎಂದು ಸಾಕ್ಷಿಯ ಸಹಿಯನ್ನು **ನಿಪಿ-2(ಎ)** ಎಂದು ಗುರುತಿಸಲಾಯಿತು.

ಮಹಜರ್ ಸಮಯದಲ್ಲಿ ಸ್ಥಳದ ಫೋಟೋ ತೆಗೆಸಿರುತ್ತೇನೆ, ಸದರಿ ಫೋಟೋವನ್ನು **ನಿಪಿ 3** ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಅಪಘಾತಕ್ಕೆ ಸಂಬಂಧಿಸಿದಂತೆ ಎರಡು ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಲಾರಿಯ 4 ಫೋಟೋಗಳನ್ನು ಈಗ ನೋಡುತ್ತಿದ್ದು ಅದನ್ನು ಒಟ್ಟಾಗಿ **ನಿಪಿ 4** ಎಂದು ಗುರುತಿಸಲಾಯಿತು. ದ್ವಿಚಕ್ರ ವಾಹನದ 2 ಫೋಟೋಗಳನ್ನು ಈಗ ನೋಡುತ್ತಿದ್ದು ಅದನ್ನು ಒಟ್ಟಾಗಿ ನಿಪಿ 5 ಎಂದು ಗುರುತಿಸಲಾಯಿತು.

ಸಿಬ್ಬಂದಿಯವರ ಮೂಲಕ ಪ್ರಕರಣಕ್ಕೆ ಸಂಬಂಧಿಸಿದಂತೆ ಫೋಟೋಗಳನ್ನು ತೆಗೆಸಿದ್ದು ಆ ಬಗ್ಗೆ ಪ್ರಮಾಣಪತ್ರಗಳನ್ನು ಪಡೆದುಕೊಂಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ 6** ಎಂದು ಗುರುತಿಸಲಾಯಿತು.

ಅಪಘಾತಕ್ಕೆ ಸಂಬಂಧಿಸಿದಂತೆ ಎರಡೂ ವಾಹನಗಳನ್ನು ಪರಿಶೀಲನೆ ಮಾಡಿ ಐ.ಎಂ.ವಿ.ವರದಿ ಸಲ್ಲಿಸುವಂತೆ ಆರ್.ಟಿ.ಓ.ರವರಿಗೆ ಮನವಿ ಸಲ್ಲಿಸಿ, ನಂತರದಲ್ಲಿ ವರದಿಯನ್ನು ಪಡೆದುಕೊಂಡಿರುತ್ತೇನೆ. ಸದರಿ ಐ.ಎಂ.ವಿ.ವರದಿಯನ್ನು ಈಗ ನೋಡುತ್ತಿದ್ದು, ಅವುಗಳನ್ನು **ನಿಪಿ-7** ಎಂದು ಗುರುತಿಸಲಾಯಿತು.

ನಂತರ ಅಪಘಾತಪಡಿಸಿದ ವಾಹನದ ಮಾಲೀಕರಿಗೆ ಐ.ಎಂ.ವಿ.ಕಾಯ್ದೆಯಡಿ ನೋಟೀಸ್ ನೀಡಿ ಉತ್ತರ ಪಡೆದಿರುತ್ತೇನೆ. ಸದರಿ ನೋಟೀಸ್ ಮತ್ತು ಉತ್ತರವನ್ನು ಈಗ ನೋಡುತ್ತಿದ್ದು, ಅವುಗಳನ್ನು **ನಿಪಿ-8 ಮತ್ತು 9** ಎಂದು ಗುರುತಿಸಲಾಯಿತು. ವಾಹನವನ್ನು ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೇನೆ.

ನಂತರ ಅಪಘಾತಕ್ಕೆ ಒಳಗಾದ ವಾಹನದ ಮಾಲೀಕರಿಗೆ ಐ.ಎಂ.ವಿ.ಕಾಯ್ದೆಯಡಿ ನೋಟೀಸ್ ನೀಡಿ ಉತ್ತರ ಪಡೆದಿರುತ್ತೇನೆ. ಸದರಿ ನೋಟೀಸ್ ಮತ್ತು ಉತ್ತರವನ್ನು ಈಗ ನೋಡುತ್ತಿದ್ದು, ಅವುಗಳನ್ನು **ನಿಪಿ-10 ಮತ್ತು 11** ಎಂದು ಗುರುತಿಸಲಾಯಿತು. ವಾಹನವನ್ನು ಬಾಂಡ್ ಪಡೆದು ಬಿಡುಗಡೆ ಮಾಡಿರುತ್ತೇನೆ.

ಮೃತರ ಪಿ.ಎಂ.ವರದಿಯನ್ನು ಸ್ವೀಕರಿಸಿ ಕಡತಕ್ಕೆ ಲಗತ್ತಿಸಿಕೊಂಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ 12** ಎಂದು ಗುರುತಿಸಲಾಯಿತು.

ಆರೋಪಿ ಠಾಣೆಗೆ ಹಾಜರಾಗಿದ್ದು, ಅವರಿಗೆ ನೋಟೀಸ್ ಜಾರಿ ಮಾಡಿರುತ್ತೇನೆ.

ಸಾಕ್ಷಿದಾರರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ.

ನಂತರ ಪ್ರಕರಣದ ತನಿಖೆ ಪೂರ್ಣಗೊಂಡಿದ್ದರಿಂದ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ :**

ದಿನಾಂಕ 27.03.2023 ರಿಂದ 28.03.2023ರವರೆಗೆ ನಾನೇ ಠಾಣಾಧಿಕಾರಿ ಆಗಿರುತ್ತೇನೆ. ಆದರೆ ನಾನು ಅನ್ಯ ಕೆಲಸದ ಮೇರೆಗೆ ಬೇರೆ ಕಡೆ ಹೋದಾಗ ಪ್ರಭಾರವನ್ನು ಬೇರೆಯವರಿಗೆ ನೀಡಿರುತ್ತೇನೆ. ಪ್ರಭಾರ ಕರ್ತವ್ಯದಲ್ಲಿದ್ದವರು ನನಗೆ ಪ್ರಕರಣಗಳ ಬಗ್ಗೆ ಮಾಹಿತಿ ನೀಡುತ್ತಾರೆ. ದಿನಾಂಕ 27.03.2023ರಂದು ರಾತ್ರಿ ಅಪಘಾತವಾದ ಬಗ್ಗೆ ನನಗೆ ಮಾಹಿತಿ ಬಂದಿರುತ್ತದೆ, ನಾನು ಸ್ಥಳಕ್ಕೆ ಹೋಗಿರುವುದಿಲ್ಲ, ಠಾಣಾಧಿಕಾರಿಗಳು ಹೋಗಿರುತ್ತಾರೆ. ಸದರಿ ರಸ್ತೆ ರಾಷ್ಟ್ರೀಯ ಹೆದ್ದಾರಿ ಆದ ಕಾರಣ ವಾಹನ ದಟ್ಟನೆ ಹಚ್ಚಿ ರುತ್ತದೆ ಎಂದರೆ ಸರಿ, ಸಾಕ್ಷಿ ಕಡಿಮೆ ಇರುತ್ತದೆ ಎಂದು ನುಡಿಯುತ್ತಾರೆ. ಅಪಘಾತವಾದ ನಂತರ ವಾಹನ ಸಂಚಾರ ಸುಗಮ ಗೊಳಿಸಲು ಚಾಸಾ 16ರವರು ಸ್ಥಳಕ್ಕೆ ಹೋಗಿ ವಾಹನಗಳನ್ನು ಪಕ್ಕಕ್ಕೆ ಹಾಕಿರುತ್ತಾರೆ. ಆ ಬಗ್ಗೆ ನನ್ನ ದಿನಾಚರಿಯಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ . ನಾನು ಸ್ಥಳ ಮಹಜರ್ ಗೆ ಬೇಟಿ ನೀಡಿದಾಗ ಸದರಿ ವಾಹನಗಳನು ಸ್ಥಳದಲ್ಲಿದ್ದವು. ಸ್ಥಳದಲ್ಲಿ ಪಂಚರ ಸಮೇತ ವಾಹನಗಳ ಪೋಟೋ ತೆಗೆಸಿಲ್ಲ. ಆ ರೀತಿ ಪೋಟೋ ತೆಗೆಸಲು ತೊಂದರೆ ಇರಲಿಲ್ಲ. ಆ ದಿನ ರಾತ್ರಿಯೇ ವಾಹನಗಳನ್ನು ಪೋಲೀಸ್ ಠಾಣೆಗೆ ತೆಗೆದುಕೊಂಡ ಕಾರಣ ಸ್ಥಳದಲ್ಲಿ ಪೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಸ್ಥಳ ಮಹಜರನ್ನು ಪೋಲೀಸ್ ಠಾಣೆಯಲ್ಲಿ ಸೃಷ್ಟಿ ಮಾಡಿದ್ದು ಅಲ್ಲಿಯೇ ಪಂಚರ ಸಹಿಯನ್ನು ಪಡೆದುಕೊಂಡಿರುತತೇನೆ ಎಂದರೆ ಸರಿಯಲ್ಲ. ವಾಹನಗಳು ಸ್ಥಳದಲ್ಲಿ ಇರುತ್ತವೆ ಎಂದು ಸ್ಥಳ ಮಹಜರಿನಲ್ಲಿ ಸುಳ್ಳಾಗಿ ನಮೂದು ಮಾಡಿರುತ್ತೇನೆ ಎಂದರೆ ಸುಳ್ಳು. ಕಚ್ಚಾ ನಕಾಶೆಯ ಪ್ರಕಾರ ಎರಡು ವಾಹನಗಳು ಬೇರೆ ಬೇರೆ ದಿಕ್ಕಿಗೆ ಹೋಗುತ್ತಿದ್ದವು. ಲಾರಿ ದ್ವಿಚಕ್ರ ವಾಹನಕ್ಕೆ ವೇಗವಾಗಿ ಬಂದು ಮುಖಾಮುಖಿ ಡಿಕ್ಕಿಪಡಿಸಿದರೆ ಲಾರಿಯ ಮುಂದಿನ ಚಕ್ರಕ್ಕೆ ಬೈಕ್ ಚಾಲಕ ಸಿಕ್ಕಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಅಪಘಾತ ಹೀಗೆ ಆಗುತ್ತದೆ ಎಂದು ಹೇಳಲು ಆಗುವುದಿಲ್ಲ. ದ್ವಿಚಕ್ರ ವಾಹನದ ಚಾಲಕನಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ. ಸದರಿ ಗೂಡ್ಸ್ ವಾಹನದಲ್ಲಿ ಸರಕು ಇತ್ತು. ಸರಕು ಇದ್ದ ಕಾರಣ ವಾಹನ ನಿಧಾನವಾಗಿ ಬರುತ್ತಿತ್ತು ಎಂದರೆ ಸರಿಯಲ್ಲ. ಬೈಕ್ ಚಾಲಕನ ತಪ್ಪಿ ನಿಂದ ಅಪಘಾತವಾಗಿರುತ್ತದೆ ಎಂದರೆ ಸುಳ್ಳು.

ಆರೋಪಿಯ ತಪ್ಪಿ ನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನದಿಂದ ಮಾಲೀಕರ ವಿಳಾಸ ನೆಲಮಂಗಲ ಆಗಿರುತ್ತದೆ, ಚಾಲಕನ ವಿಳಾಸ ಕಿರಂಗೂರು ಆಗಿರುತ್ತದೆ. ಯಾವ ಕಾರಣಕ್ಕೆ ಮಾಲೀಕರು ಚಾಲಕನಿಗೆ ದ್ವಿಚಕ್ರ ವಾಹನ ಕೊಟ್ಟಿದ್ದರು ಎಂದರೆ ಸಾಕ್ಷಿ ಸ್ನೇಹಿತರು ಎಂಬ ಕಾರಣಕ್ಕೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಅವರು ಸ್ನೇಹಿತರು ಎಂಬ ಬಗ್ಗೆ ದಾಖಲೆಯಲ್ಲಿ ನಮೂದು ಇಲ್ಲ. ಚಾಸಾ15 ರವರು ಹೇಳಿಕೆ ದಾಖಲು ಮಾಡಿಕೊಂಡಿಲ್ಲ, ನೋಟೀಸ್ ನೀಡಿ ಉತ್ತರ ಪಡೆದುಕೊಂಡಿರುತ್ತೇನೆ. ಚಾಸಾ 1ರವರಿಂದ ಬೈಕನ್ನು ಅವರು ಚಾಸಾ 15ರವರಿಂದ ಪಡೆದ ಬಗ್ಗೆ ಮುಂದುವರೆದ ಹೇಳಿಕೆ ಪಡೆದಿಲ್ಲ. ನಿಪಿ 6 ಕಾನೂನು ಪ್ರಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ತಪ್ಪು ಮಾಡದೇ ಇದ್ದರೂ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಂತಿಮ ವರದಿಯಲ್ಲಿ ಹೇಳಿರುವಂತೆ ಅಪಘಾತವಾಗಿದ್ದರೇ ಬೈಕ್ ಚಾಲಕನಿಗೂ ಸಹ ಗಂಭೀರ ಗಾಯಗಳಾಗುತ್ತಿದ್ದವು ಎಂದರೆ ಸರಿಯಲ್ಲ. ಬೈಕ್ ಚಾಲಕನ ತಪ್ಪಿನಿಂದಲೇ ಅಪಘಾತವಾಗಿದ್ದರೂ ಮೃತರ ಕುಟುಂಬಕ್ಕೆ ವಿಮೆ ಪರಿಹಾರ ಕೊಡಿಸುವ ಸಲುವಾಗಿ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**